# ಉದಯವಾಣಿ
ಜನಮನದ ಜೀವನಾಡಿ

ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ

Regd.No.UDP/1259/2015-17 | udayavani.com | UDAYAVANI – KANNADA DAILY – MANIPAL ಮಣಿಪಾಲ, ಶುಕ್ರವಾರ, ಸೆಪ್ಟಂಬರ್ 15, 2017 ಬೆಲೆ: ₹ 5-00 ವಿದೇಶ ಬೆಲೆ: ₹ 6-00 ಪುಟಗಳು 12+8+4



ನಮ್ಮ ನ್ಯೂಸ್ ಆ್ಯಪ್ ಅನ್ನು ಇಂದೇ ಡೌನ್‌ಲೋಡ್ ಮಾಡಿಕೊಳ್ಳಿ

udayavani.com

CENTRAL LIBRARY


## ಕೌಶಲ ಆಧಾರಿತ ಕಲಿಕೆಗೆ ಒತ್ತು ಅಗತ್ಯ: ಡಾ। ರವಿ

**ಮಹಾನಗರ,** ಸೆ.14: ಶಿಕ್ಷಣದ ಅರ್ಥ ಮತ್ತು ಕೌಶಲ ಆಧಾರಿತ ಕಲಿಕೆಗೆ ಹೆಚ್ಚಿನ ಒತ್ತು ನೀಡುವ ಅವಶ್ಯವಿದೆ ಎಂದು ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಡಾ। ಎಂ.ಆರ್. ರವಿ ಹೇಳಿದರು.

ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್‌ನ 2017-18 ಬ್ಯಾಚ್‌ನ ಫ್ರೆಷರ್ಸ್ ಡೇ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



ಸಹ್ಯಾದ್ರಿ ಕಾಲೇಜಿನಲ್ಲಿ ಫ್ರೆಷರ್ಸ್ ಡೇ ನಡೆಯಿತು.

ಅವರು ಅನುಭವಗಳನ್ನು ಮತ್ತು ಸ್ವಾಮಿ ವಿವೇಕಾನಂದ, ಎಮಿಲಿ ಡ್ಯುರಾಂಟ್ ಹಾಗೂ ಬರ್ಟ್ ರಸ್ಸೆಲ್ ಅವರಂತಹ ಶ್ರೇಷ್ಠ ವ್ಯಕ್ತಿಗಳ ಆಲೋಚನೆಗಳನ್ನು ಶಿಕ್ಷಣದ ಬಗ್ಗೆ ವಿದ್ಯಾರ್ಥಿಗಳಿಗೆ ಹಂಚಿಕೊಂಡರು. ಡಾ। ಉಮೇಶ್ ಎಂ. ಭುಶಿ, ಭಂಡಾರಿ ಫೌಂಡೇಶನ್ ಅಧ್ಯಕ್ಷ ಮಂಜುನಾಥ್ ಭಂಡಾರಿ ಮುಖ್ಯ ಅತಿಥಿಯಾಗಿದ್ದರು.

ಶುಕ್ರವಾರ,15 ಸೆಪ್ಟೆಂಬರ್ 2017 | ಪುಟಗಳು: 16+6+6(UDP 4+4) | ಬೆಲೆ: ₹ 5.00
www.vijaykarnataka.com
ಸಂಪುಟ: 17 | ಸಂಚಿಕೆ: 50
VK
ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ | ಚಿತ್ರದು
Happy Engineer's Day



ಟಿವಿ ಕಲಾವಿದರು ಚಿತ್ರ ತಾರೆಯರಿಗಿಂತ ಹೆಚ್ಚು ಸಂಭಾವನೆಗೆ ಅರ್ಹರು: ಅಕ್ಷಯ್ ಕುಮಾರ್



ಶಿಕ್ಷಕರು, ಬೋಧಕೇತರ ಸಿಬ್ಬಂದಿಯ ಮನೋದಾರ್ಢ್ಯತೆ ಪರೀಕ್ಷೆಗೆ ಮಾರ್ಗದರ್ಶಿ ಸೂತ್ರ ರೂಪಿಸಿದ ಸಿಬಿಎಸ್‌ಇ

ಪತ್ನಿಗೆ ಅನಾರೋಗ್ಯ: ಆಸೀಸ್ ವಿರುದ್ಧದ ಏಕದಿ
ಸರಣಿಯ 3 ಪಂದ್ಯಕ್ಕೆ ಧವನ್ ಅಲಭ್ಯ

# ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಉಚಿತ ನೋಟ್ಸ್‌ಗಾಗಿ ಎಂಜಿನೇರಾ

■ **ಸ್ಟೀವನ್ ರೇಗೊ** ಮಂಗಳೂರು

ಮೊದಲ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಉಚಿತವಾಗಿ ನೋಟ್ಸ್ ಹಾಗೂ ಇತರ ಸಮಸ್ಯೆ ಪರಿಹಾರಗಳನ್ನು ಒದಗಿಸಲು ಒಂಬತ್ತು ಮಂದಿ ಹಿರಿಯ ಎಂಜಿನಿಯರಿಂಗ್ ವಿದ್ಯಾರ್ಥಿಗಳು 'ಎಂಜಿನೇರಾ' ಆ್ಯಪ್‌ವೊಂದನ್ನು ತಯಾರಿಸಿದ್ದಾರೆ.

ರಾಜ್ಯದ ಸ್ವಾಯತ್ತ ಹಾಗೂ ವಿಟಿಯುನ ಪ್ರಥಮ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ತಯಾರಿ ಸಿದ ನೋಟ್ಸ್‌ಗಳು ಈ ಆ್ಯಪ್‌ನೊಳಗೆ ನೀಡಲಾಗಿದೆ. ಮುಖ್ಯವಾಗಿ ಮೆಕ್ಯಾನಿಕಲ್, ಸಿವಿಲ್, ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಾನಿಕ್ಸ್, ಎಲೆಕ್ಟ್ರಿಕಲ್, ಇನ್ಫಾರ್ಮೇಶನ್ ಸೈನ್ಸ್ ಹೀಗೆ ಎಲ್ಲ ಬ್ರಾಂಚ್‌ಗಳ ನೋಟ್ಸ್‌ಗಳನ್ನು ಪಾಯಿಂಟ್ ವೈಸ್ ಹಾಗೂ ಡಯಾಗ್ರಾಮ್‌ಗಳ ಮೂಲಕ ವಿವರಣೆ ನೀಡಲಾಗಿದೆ. ಇದು ಎಂಜಿನಿಯರ್‌ಗಳಿಗೆ ಬಹಳಷ್ಟು ದೊಡ್ಡ ವರದಾನವಾಗಲಿದೆ ಎನ್ನುತ್ತಾರೆ ಆ್ಯಪ್‌ನ ಮುಖ್ಯ ರೂವಾರಿ, ನಿಟ್ಟೆಯ ಮೆಕ್ಯಾನಿಕಲ್ ಎಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿ ರಾಹುಲ್ ಆರ್. ಪೈ.

**ಸುದೀರ್ಘ ಕಾಲದ ಹೋಮ್ ವರ್ಕ್:** 2017ರ ಜನವರಿಯಿಂದ ಪ್ರತಿದಿನ ನಾಲ್ಕು ಗಂಟೆಗಳ ಕಾಲ ಈ ಆ್ಯಪ್‌ಗೆ ತಯಾರಿ ಮಾಡಿದ್ದೇವು. ಆ್ಯಂಡ್ರಾಯ್ಡ್ ಸ್ಟುಡಿಯೋ ಮೂಲಕ ಕೋಡಿಂಗ್ ಮಾಡಿ ವಿಚಾರಗಳನ್ನು ಅಪ್‌ಲೋಡ್ ಮಾಡುವ ಕೆಲಸವನ್ನು ನಾವೇ ಮಾಡಿದ್ದೇವೆ. ಈ ಕಾರಣದಿಂದ ಆ್ಯಪ್‌ಗೆ ಹಣದ ಅವಶ್ಯಕತೆ ಬೀಳಲಿಲ್ಲ. ಲೋಗೋವನ್ನು ಕೂಡ ನಾವೇ ಡಿಸೈನ್ ಮಾಡಿದ ಪರಿಣಾಮ ಅಲ್ಲೂ ಖರ್ಚಿಲ್ಲ. ಆದರೆ ಗೂಗಲ್ ಪ್ಲೇಸ್ಟೋರ್‌ಗೆ ಮಾತ್ರ 25 ಡಾಲರ್ ಒಂದು ಬಾರಿಗೆ ಪಾವತಿ ಮಾಡಿದ್ದೇವೆ. ಇನ್ನು ಮುಂದೆ ಮತ್ತಷ್ಟು ನೋಟ್ಸ್‌ಗಳನ್ನು ಅಪ್‌ಲೋಡ್ ಮಾಡುತ್ತಾ ಸಾಗುತ್ತೇವೆ ಎನ್ನುತ್ತಾರೆ ರಾಹುಲ್ ಪೈ.

ಎಂಜಿನಿಯರ್ ವಿದ್ಯಾರ್ಥಿಗಳಿಗೆ ಪರೀಕ್ಷೆ ಸಮಯದಲ್ಲಿ ಕೆಲವೊಂದು ಸಲ ನೋಟ್ಸ್‌ಗಳ ಸಮಸ್ಯೆ ಜಾಸ್ತಿಯಾಗಿರುತ್ತದೆ. ಯಾವುದನ್ನು ಜೆರಾಕ್ಸ್ ಮಾಡಿಕೊಂಡು ಇಟ್ಟುಕೊಳ್ಳಬೇಕು. ಅದು ಪರೀಕ್ಷೆಗೆ ಯಾವ ರೀತಿ ಸಹಕಾರಿ ಎನ್ನುವ ವಿಚಾರಗಳು ತಿಳಿದಿರುವುದಿಲ್ಲ. ನೋಟ್ಸ್‌ಗಳು ಸರಿಯಿಲ್ಲದೇ ವಿದ್ಯಾರ್ಥಿಗಳು ಕೊನೆ ಕ್ಷಣದಲ್ಲಿ ಕಂಗಾಲಾಗುತ್ತಾರೆ. ಇದು ನಮ್ಮ ವಿಚಾರದಲ್ಲೂ ಸಾಕಷ್ಟು ಬಾರಿ ನಡೆದಿದೆ. ಇಂತಹ ಸಮಸ್ಯೆ ನಮ್ಮ ಜೂನಿಯರ್‌ಗಳಿಗೆ ಆಗ ಕೂಡದು ಎನ್ನುವ ದೃಷ್ಟಿಯಿಂದ ಈ ಆ್ಯಪ್ ಮಾಡಿದ್ದೇವೆ ಎನ್ನುತ್ತಾರೆ ನಿಟ್ಟೆ ಎಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿ ಪ್ರಜ್ವಲ್.




## 9 ವಿದ್ಯಾರ್ಥಿಗಳ ಸಾಹಸ

ರಾಹುಲ್ ಆರ್. ಪೈ ಈ ಹಿಂದೆ 'ಮ್ಯಾತ್ಸ್ ಮೇಡ್ ಈಸಿ' ಎನ್ನುವ ಕೃತಿಯ ಮೂಲಕ ಗಣಿತಶಾಸ್ತ್ರವನ್ನು ಯಾವ ರೀತಿಯಲ್ಲಿ ಸುಲಭದಲ್ಲಿ ಕಲಿಯಬಹುದು ಎನ್ನುವ ವಿಚಾರವನ್ನು ತಿಳಿಯಪಡಿಸಿದ್ದಾರೆ. ಅದರಲ್ಲೂ ಮುಖ್ಯವಾಗಿ 'ಹ್ಯಾಂಡ್‌ಬುಕ್ ಫಾರ್ ಕೆ-ಸಿಇಟಿ' ಯನ್ನು ಆನ್‌ಲೈನ್ ಮೂಲಕ ಬಿಡುಗಡೆ ಮಾಡಿ ಸಾಕಷ್ಟು ಹೆಸರು ಪಡೆದುಕೊಂಡಿದ್ದಾರೆ. ಇನ್ನು ಉಳಿದಂತೆ ನಿಟ್ಟೆಯ ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ ವಿದ್ಯಾರ್ಥಿನಿ ಪೂಜಾ ಶೆಟ್ಟಿ, ವಿಶುವಲ್ ಡಿಸೈನರ್ ದೀಪ್ತಿ ಪೈ, ಬೆಂಗಳೂರಿನ ಬಿಎಂಎಸ್‌ಸಿಇಯ ವಿದ್ಯಾರ್ಥಿ ಪ್ರಜ್ವಲ್, ಬಿಎಂಎಸ್‌ಐಟಿ ಬೆಂಗಳೂರಿನ ಶೀತಲ್ ಎಚ್.ಎಂ, ಬಿಎಂಎಸ್ ಕಾಲೇಜಿನ ಅರ್ಪಿತಾ, ನಿಟ್ಟೆಯ ಸಾಧನಾ ಮಯ್ಯ, ಮಹಮ್ಮದ್ ಮುಬೀನ್ ಶೇಕ್, ಪ್ರಜ್ವಲ್ ಪಿ. ಈ ಆ್ಯಪ್ ಹಿಂದಿರುವ ರೂವಾರಿಗಳು. ಅಂದಹಾಗೆ ಸೆ.16ರಂದು ಸಂಜೆ 4ಕ್ಕೆ ಮಂಗಳೂರಿನ ಕಂಕನಾಡಿಯಲ್ಲಿರುವ ಟ್ಯಾಲೆಂಟ್ ರಿಸರ್ಚ್ ಫೌಂಡೇಶನ್ ಸಭಾಂಗಣದಲ್ಲಿ ಇದರ ಉದ್ಘಾಟನೆ ನಡೆಯಲಿದೆ. ಈ ಬಳಿಕ ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.